# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ.

**ಉಪಸ್ಥಿತರುಃ**

**ಶ್ರೀ ಲಕ್ಷ್ಮೀ ನರಸಿಂಹ ಆರ್.ವಿ,**

**ಬಿ.ಎ.ಎಲ್., ಎಲ್.ಎಲ್.ಬಿ.,**

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಸಕಲೇಶಪುರ.

## ಸಿ.ಸಿ.ನಂ.576/2025

**ಪಿರ್ಯಾದುದಾರರು** : ಸಕಲೇಶಪುರ ಗ್ರಾಮಾಂತರ ಪೋಲೀಸ್ ಠಾಣೆ

-ವಿರುದ್ಧ-

ಆರೋಪಿ : ಗುರಪ್ಪ ಬಿನ್ ಲೇಟ್ ಕೆಂಚಯ್ಯ,
54 ವರ್ಷ,
ವಾಸ - ಬಂಡಿಹಳ್ಳಿ ಗ್ರಾಮ, ಬೆಳಗೋಡು ಹೋಬಳಿ,
ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

**ದೋಷಾರೋಪಣೆ**

ನಾನು ಲಕ್ಷ್ಮೀ ನರಸಿಂಹ ಆರ್.ವಿ, ಬಿ.ಎ.ಎಲ್., ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ಸಕಲೇಶಪುರ, ಈ ಮೂಲಕ ಆರೋಪಿಯಾದ ಇವರ ಮೇಲೆ ಮಾಡಿದ ದೋಷಾರೋಪಣೆ ಏನೆಂದರೆ.

ದಿನಾಂಕಃ- 07.04.2025 ರಂದು ಮಧ್ಯಾಹ್ನ 12.45 ಗಂಟೆಯ ಸಮಯದಲ್ಲಿ ಸಕಲೇಶಪುರ ತಾಲ್ಲೂಕು ಬೆಳಗೋಡು ಹೋಬಳಿ ಬಂದಿಹಳ್ಳಿ ಗ್ರಾಮದ ಆರೋಪಿಯಾದ ನೀವು ತನ್ನ ಚಿಲ್ಲರೆ ಅಂಗಡಿಯ ಮುಂಭಾಗದ ಖಾಲಿ ಜಾಗದಲ್ಲಿ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಮಧ್ಯವನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಮದ್ಯವನ್ನು ಇಟ್ಟುಕೊಂಡಿರುವುದಾಗಿ ಚಾಸಾ-1 ರವರಿಗೆ ಮಾಹಿತಿ ಬಂದ ಮೇರೆಗೆ ಅದೇ ಚಾಸಾ-1 ರಿಂದ ಚಾಸಾ-3 ರವರು ಪಂಚರೊಂದಿಗೆ ಮಧ್ಯಾಹ್ನ 2.15 ಗಂಟೆ ಸಮಯಕ್ಕೆ ಬಂದಿಹಳ್ಳಿ ಗ್ರಾಮದ ಆರೋಪಿಯ ಮನೆಯ ಸಮೀಪ ಹೊದಾಗ ಆರೋಪಿಯು ತನ್ನ ಚಿಲ್ಲರೆ ಅಂಗಡಿ ಮುಂಭಾಗದ ಖಾಲಿ ಜಾಗದಲ್ಲಿ 3405/- ರೂ. ಬೆಲೆ ಬಾಳುವ ಮದ್ಯ ತುಂಬಿದ 1) 650 ಎಂ.ಎಲ್.ನ 5 ರಾಯಲ್ ಚಾಲೆಂಜ್ ಸ್ಟ್ರಾಂಗ್ ಪ್ರೀಮಿಯಂ ಬಿಯರ್ 2) 90 ಎಂ.ಎಲ್.ನ 32 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ 3) 90 ಎಂ.ಎಲ್.ನ 6 ಓಲ್ಡ್ ಟಾವರಿನ್ ವಿಸ್ಕಿ 4) 180 ಎಂ.ಎಲ್.ನ 4 ಬ್ಯಾಗ್ ಪೈಪರ್ ವಿಸ್ಕಿ 5) 90 ಎಂ.ಎಲ್.ನ 6 ಓಲ್ಡ್ ಆಡ್ಮಿರಲ್ ಗಳನ್ನು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೆ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ

ಇಟ್ಟುಕೊಂಡಿರುವ ಕಾರಣ ಕರ್ನಾಟಕ ಅಬಕಾರಿ ಕಾಯಿದೆ ಕಲಂ 32, 34 ರಂತೆ ಅಪರಾಧವಾಗಿದ್ದು ದಂಡನೀಯವಾದ ಅಪರಾಧವನ್ನು ಎಸಗಿರುವಿರಿ. ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಮತ್ತು ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ನಿರ್ದೇಶಿಸುತ್ತೇನೆ.

ಓ.ಹೇ.ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಸಕಲೇಶಪುರ.

ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ
ನ್ಯಾಯಾಲಯ, ಸಕಲೇಶಪುರ

**ಸಿ ಸಿ ನಂ. 576/2025**

ಪಿರ್ಯಾದುದಾರರು : -ವಿರುದ್ಧ- ಆರೋಪಿ :

ರಾಜ್ಯದ ಪರವಾಗಿ

ಸಕಲೇಶಪುರ ಗ್ರಾಮಾಂತರ ಪೋಲೀಸ್ ಠಾಣೆ ಗುರಪ್ಪ ಬಿನ್ ಲೇಟ್ ಕೆಂಚಯ್ಯ,

ಪ್ರಶ್ನೆ:- 1. ಈಗ ನಿಮಗೆ ಕನ್ನಡದಲ್ಲಿ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೇ ?
ಉತ್ತರ :

ಪ್ರಶ್ನೆ:-2. ನೀವು ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?
ಉತ್ತರ :

ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಕಲೇಶಪುರ.